ISSN : 0974-0066

84

Vol-84 No. 03,
July – December: 2023

# मध्य भारती

मानविकी एवं समाजविज्ञान की द्विभाषी शोध-पत्रिका

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

Dr. N. V. Gadag

# मध्य भारती

**मानविकी एवं समाजविज्ञान की द्विभाषी शोध-पत्रिका**

ISSN 0974-0066

UGC Care List, Group-C (Multi disciplinary), Sl.no.-15

**विशेषांक**

राष्ट्रीय शिक्षा नीति-2020 : परिप्रेक्ष्य और परिवर्त्य

**संरक्षक**

प्रो. नीलिमा गुप्ता
कुलपति

**प्रधान सम्पादक**

प्रो. अम्बिकादत्त शर्मा

**सम्पादक**

प्रो. भवतोष इन्द्रगुरू
प्रो. ब्रजेश कुमार श्रीवास्तव
डॉ. आशुतोष कुमार मिश्र

**अतिथि सम्पादक**

डॉ. संजय शर्मा

**प्रबन्ध सम्पादक**

डॉ. छबिल कुमार मेहेर

**डॉक्टर हरीसिंह गौर विश्वविद्यालय**
सागर (मध्यप्रदेश) - 470003

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

CONTENT


| S.No | TITLE | Page No |
|---|---|---|
| 1 | ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಧಾರವಾಡ ಪ್ರದೇಶದ ಕನ್ನಡದ ಸ್ಥಿತಿ–ಗತಿ | 1 |
| 2 | IMPINGEMENT OF PANDEMIC ON MCLR AND SDG'S – IN INDIA | 5 |
| 3 | FINTECH IN ARUNACHAL PRADESH: A DESCRIPTIVE ANALYSIS | 10 |
| 4 | INNOVATION AND ENTREPRENEURSHIP: DRIVING FORCES FOR ECONOMIC GROWTH AND DEVELOPMENT | 14 |
| 5 | A STUDY ON GENERATIONS X ONLINE SHOPPING PREFERENCES IN INDIA | 19 |
| 6 | सहरिया जनजाति परिवारों में महिलाओं की शैक्षिक स्थिति और बच्चों के स्कूल छोड़ने के कारणों एवं स्थिति पर एक अध्ययन | 35 |
| 7 | A THEORETICAL STUDY OF HIGHER EDUCATION IN INDIA AND IN THE CONTEXT OF "NEP 2020 " | 44 |
| 8 | A STUDY ON CUSTOMER ENGAGEMENT IN SOCIAL MEDIA WITH REFERENCE TO MILLENNIALS | 50 |
| 9 | A STUDY ON THE IMPACT OF SALARY ,APPRECIATION ,JOB SECURITY AND PROMOTION ON JOB SATISFACTION OF EMPLOYEES | 57 |
| 10 | जनजातीय क्षेत्र में शिक्षा के महत्त्व एवं की शिक्षा प्रणाली का अध्ययन | 61 |
| 11 | GENDER AND MARGINALISATION: FEMINISATION OF WORK IN TEA PLANTATION OF ASSAM | 66 |
| 12 | उच्चतर माध्यमिक विद्यालय के शिक्षकों के व्यावसायिक विकास के आयाम शिक्षण में दक्षता प्राप्तांको पर सूचना तकनीकी अभिवृत्ति लिंग एवं परिवेश का मुख्य एवं अन्तःक्रियात्मक प्रभाव का अध्ययन करना | 70 |
| 13 | LANGUAGE TEACHING AND TESTING METHODS IN PHONOLOGY | 77 |
| 14 | A STUDY ON CONSUMER WISDOM CONCERNING COUNTERFEITED AND PIRATED PRODUCTS81 | 81 |


CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

**Madhya Bharti** -Humanities and Social Sciences **UGC Care Group I Journal**
**(मध्य भारती) ISSN: 0974-0066** **Vol-84 No. 03, July – December: 2023**

# ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಧಾರವಾಡ ಪ್ರದೇಶದ ಕನ್ನಡದ ಸ್ಥಿತಿ–ಗತಿ

**ಡಾ. ವಿಠ್ಠಲ ಕೋಳಿ** ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ–೫೮೨ ೧೦೨
ಮೇಲ್.ಐಡಿ- vithalkoli1@gmail.com

೧೮೧೮ರ ಹೊತ್ತಿಗೆ ಧಾರವಾಡ ಪ್ರದೇಶವು ಬ್ರಿಟಿಷರ ಅಧಿಪತ್ಯಕ್ಕೆ ಒಳಗಾಯಿತು. ಆಗ ಧಾರವಾಡ ಪ್ರದೇಶವನ್ನು ಯಾವ ಆಡಳಿತದ ವಿಭಾಗಕ್ಕೆ ಸೇರಿಸಬೇಕೆಂಬ ಪ್ರಶ್ನೆ ಮುಂದೆ ಬಂದಾಗ, ಅದರ ಕುರಿತು ಮುಂಬೈ, ಮದ್ರಾಸ್ ಸರ್ಕಾರಗಳ ಮಧ್ಯ ಪತ್ರವ್ಯವಹಾರಗಳ ಮೂಲಕ ಚರ್ಚೆಯು ನಡೆಯಿತು. ಬೆಳಗಾವಿ, ವಿಜಯಪುರಗಳನ್ನು ಒಳಗೊಂಡ ಧಾರವಾಡ ಪ್ರದೇಶವನ್ನು ಮೈಸೂರು, ಬಳ್ಳಾರಿ ಮೊದಲಾದ ಕನ್ನಡ ಪ್ರದೇಶಗಳನ್ನು ಒಳಮಾಡಿ ಮುಂಬೈ ಪ್ರಾಂತ್ಯಕ್ಕೆ ಜೋಡಿಸಬೇಕೆಂದು ಸರ್.ಥಾಮಸ್ ಮನ್ರೋ ಅವರು ಹೇಳಿದರು. ಆದರೆ ರಕ್ಷಣೆಯ ದೃಷ್ಟಿಯಿಂದ ಮುಂಬೈಗೆ ಸೇರಿಸಬೇಕೆಂದು ಮುಂಬೈ ಗೌರ್ನರ್ ಅವರು ಈಸ್ಟ್ ಇಂಡಿಯಾ ಕಂಪನಿಗೆ ಬೇಡಿಕೆಯನ್ನು ಇಟ್ಟರು. ಅದಕ್ಕೆ ಮನ್ನಣೆಯು ದೊರಕಿತು. ಈ ಮೂಲಕ ಕನ್ನಡಿಗರನ್ನು ಮರಾಠಿಗರ ಒತ್ತಡಕ್ಕೆ ಬ್ರಿಟಿಷರೇ ಒಳಪಡಿಸಿ ಕನ್ನಡಿಗರ ದುಸ್ಥಿತಿಗೆ ದಾರಿ ಮಾಡಿದರು. ನಂತರದಲ್ಲಿ ಸರ್.ಥಾಮಸ್ ಮನ್ರೋ ಅವರು ಭಾಷಾವಾರು ಪ್ರಾಂತ್ಯರಚನೆಗೆ ಒಪ್ಪಿಗೆಯನ್ನು ಸೂಚಿಸಿದ್ದರು.[೧] ಕನ್ನಡಿಗರ ಮೇಲೆ ಅನ್ಯ ನುಡಿಗರ ಪ್ರಭಾವ, ದಬ್ಬಾಳಿಕೆ ಹೆಚ್ಚಾಗತೊಡಗಿತು. ಈ ಹೊತ್ತಿಗೆ ಆಲೂರು ವೆಂಕಟರಾಯರು ಮತ್ತು ಇತರೆ ಕನ್ನಡ ವಿಚಾರವಂತರು, ಕನ್ನಡಿಗರಲ್ಲಿ ಕನ್ನಡತ್ವದ ಜಾಗೃತಿಯನ್ನು ಮೂಡಿಸತೊಡಗಿದರು. ಗಂಗಾಧರರಾವ ದೇಶಪಾಂಡೆ ಅವರು ಮೆಟ್ರಿಕ್ ನಂತರದ ಶಿಕ್ಷಣಕ್ಕೆ ಪುಣೆಯ ಡೆಕ್ಕನ್ ಕಾಲೇಜು ಸೇರಿ ಉನ್ನತ ಶಿಕ್ಷಣ ಪಡೆದರು. ಆಗ ಪುಣೆಯಲ್ಲಿ ಕನ್ನಡ ಕ್ಲಬ್ ಹಾಗೂ ಮರಾಠಿ ಕ್ಲಬ್‌ಗಳು ಅಸ್ಥಿತ್ವದಲ್ಲಿದ್ದವು. ಗಂಗಾಧರರಾವರು ಕನ್ನಡ ಕ್ಲಬ್‌ನ ಸದಸ್ಯರಾದರು. ಈ ಕ್ಲಬ್‌ನಲ್ಲಿ ಬೆಳಗಾವಿಯ ಪ್ರಸಿದ್ಧ ವಕೀಲರಾಗಿದ್ದ ನಾರಾಯಣರಾವ, ಶೇಷಗಿರಿರಾವ್ ದಾತರ, ಹನುಮಂತರಾವ ಸಬನೀಸ್, ಕೃಷ್ಣರಾವ್ ಆನಿಖಂಡಿ, ಶ್ರೀನಿವಾಸರಾವ ಕೌಜಲಗಿ, ವಿಠಲರಾವ ಗಾಯತಂಡೆ, ದಾದಾಬಾಯಿ ನರಗುಂದಕರ ಮೊದಲಾದ ಕನ್ನಡಿಗರು ಕನ್ನಡದ ಕೆಲಸವನ್ನು ಮಾಡುತಿದ್ದುದು ವಿಶೇಷ.

### ಕನ್ನಡ ಸಂಘಟನೆಗಳ ಹುಟ್ಟು ಮತ್ತು ಚಳವಳಿ

೧೯೦೭ ರಲ್ಲಿ ಮೊದಲನೇ ಕನ್ನಡ ಗ್ರಂಥಕರ್ತರ ಸಮ್ಮೇಳನವನ್ನು ಧಾರವಾಡದಲ್ಲಿ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವದಲ್ಲಿ ಹಮ್ಮಿಕೊಳ್ಳಲಾಯಿತು. ಎಸ್.ಜಿ.ನರಸಿಂಹಾಚಾರ್ಯರು ಅದರ ಅಧ್ಯಕ್ಷತೆಯನ್ನು ವಹಿಸಿಕೊಂಡರು. ೨ನೇ ಸಮ್ಮೇಳನವು ಸಹ ಧಾರವಾಡದಲ್ಲಿ ನಡೆಯಿತು. ಬೆಳಗಾವಿಯಲ್ಲಿ ಮರಾಠಿಗರು ದಬ್ಬಾಳಿಕೆಯನ್ನು ನಿಲ್ಲಿಸುವಂತೆ ಆಲೂರರು ಆಗಾಗ ತಮ್ಮ ಭಾಷಣ ಮತ್ತು ಬರೆಹದಲ್ಲಿ ಹೇಳುತಿದ್ದರು. ಅದೇ ಹೊತ್ತಿಗೆ ಧಾರವಾಡದಲ್ಲಿ ಕನ್ನಡ ಹೇಗೆ ಫ್ಯಾಷನ್ ಆಗಿತ್ತೋ, ಹಾಗೆ ಬೆಳಗಾವಿಯಲ್ಲಿ ಮರಾಠಿ ಫ್ಯಾಷನ್ ಆಗಿ ರೂಪುಗೊಂಡಿತ್ತು. ಮರಾಠಿಗರು ಅರಾಷ್ಟ್ರೀಯವಾದ ಹಾಗೂ ಆಕ್ರಮಣಶೀಲವಾದ ಬೃಹನ್ಮಹಾರಾಷ್ಟ್ರದ ಪರಿಕಲ್ಪನೆಯನ್ನು ಹೊಂದಿದ್ದರು. ಈ ಪ್ರಕಾರ ಅವರು ಎಲ್ಲೇ ಇರಲಿ ಮರಾಠಿಗರೆಂಬ ಅಭಿದಾನವನ್ನು ಬಿಟ್ಟುಕೊಡದೆ, ತಾವು ನೆಲೆಸಿರುವ ಪ್ರದೇಶವು ತಮ್ಮದೆಂದು ಆ ಪ್ರದೇಶವನ್ನು ಮಹಾರಾಷ್ಟ್ರವೆಂದು ತಿಳಿಯತಕ್ಕದ್ದು ಎಂಬ ವಾದ ಅವರದಾಗಿತ್ತು.[೨] ತಾವು ನೆಲೆಸಿದ ಕನ್ನಡ ಪ್ರದೇಶಗಳಲ್ಲಿ ಅವರು ಶಿವಾಜಿ ಉತ್ಸವವನ್ನು ಮಾಡುತಿದ್ದರು. ಕನ್ನಡಿಗರು ಆಚರಿಸುವ ವಿದ್ಯಾರಣ್ಯ ಉತ್ಸವ, ನಾಡಹಬ್ಬಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಈ ಥರದ ಮನೋವಿಕಾರಗಳಿಂದಲೇ ಭಾಷಾ ವೈಷಮ್ಯಗಳು ಉಳಿದಿರಲು ಕಾರಣವಾಗಿವೆ. ಈ ಕಾರಣಕ್ಕಾಗಿ ಭಾಷಾವಾರು ಪ್ರಾಂತ್ಯಗಳು ರಚನೆಯಾದಾಗ ಮಾತ್ರ ಅನ್ಯ ನುಡಿಗರ ಒತ್ತಡವು ನಿಲ್ಲುತ್ತದೆ ಎನ್ನುವ ಯೋಚನೆಯ ಆಧಾರದಿಂದ ಭಾಷಾ ಚಳವಳಿಗಳು ಹುಟ್ಟಿಕೊಂಡವು. ೧೯೧೫ರ ಸಂದರ್ಭದಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ರಾಜಕೀಯ ಸ್ಥಾನಮಾನಗಳಿರಲಿಲ್ಲ. ಆಗ ರಾಷ್ಟ್ರೀಯ ಚಳವಳಿಯು ಇನ್ನೂ ತೀವ್ರ ಸ್ವರೂಪವನ್ನು ಪಡೆದಿರಲಿಲ್ಲ. ಕರ್ನಾಟಕಕ್ಕೆ ಬರುತ್ತಿದ್ದ ಮುಂಬೈ ಪ್ರಾಂತ್ಯದ ನಾಯಕರಲ್ಲಿ ಹೆಚ್ಚಾಗಿ ಮಹಾರಾಷ್ಟ್ರದಿಂದ ಬಂದವರಿದ್ದರು. ಕನ್ನಡದ ಅಸ್ತಿತ್ವವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದ ಧಾರವಾಡ, ವಿಜಯಪುರ, ಬೆಳಗಾವಿ, ಕಾರವಾರ, ಸೊಲ್ಲಾಪುರಗಳು ಅಚ್ಚ ಕನ್ನಡದ ಪ್ರದೇಶಗಳಾಗಿದ್ದರೂ, 'ಸದರ್ನ್ ಮರಾಠ' ಪ್ರದೇಶಗಳೆಂದು ಕರೆಯಲ್ಪಡುತ್ತಿದ್ದವು.[೩] ಆ ಕಾಲಕ್ಕೆ ತಿಲಕರ ಅನುಯಾಯಿಗಳಾಗಿದ್ದ ಬೆಳಗಾವಿಯ ಗಂಗಾಧರರಾವ ದೇಶಪಾಂಡೆ, ವಿಜಯಪುರದ ಶ್ರೀನಿವಾಸರಾವ ಕೌಜಲಗಿ ಮೊದಲಾದವರು ಕನ್ನಡಿಗರಲ್ಲಿ ರಾಷ್ಟ್ರೀಯ

 Published by : Dr. Harisingh Gour University

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ಹೋರಾಟದ ಅರಿವನ್ನು ಬಿತ್ತುವ ಕೆಲಸಕ್ಕೆ ಮುಂದಾದರು. ಇವರೊಂದಿಗೆ ಆಲೂರ ವೆಂಕಟರಾಯರು, ಮುದವಿಡು ಕೃಷ್ಣರಾಯರು, ಗದಿಗೆಯ್ಯ ಹೊನ್ನಾಪುರ ಮಠ, ವೆಂಕಟರಾವ ಜೋಶಿ, ಶೇಷಗಿರಿ ರಾಮಚಂದ್ರರಾಯ, ಶಾಂತಕವಿ, ಕಡಪ ರಾಘವೇಂದ್ರರಾಯ, ಅಬ್ಬಿಗೇರಿ ಪಾಟೀಲ ಸಂಗನಗೌಡರು, ನವಲಗುಂದದ ಕುಲಕರ್ಣಿ ಕರಿವೀರಪ್ಪನವರು ಪ್ರಮುಖರಾಗಿದ್ದರು. ಪ್ರಬಲವಾದ ರಾಜಕೀಯ ಶಕ್ತಿ ಇಲ್ಲದೆ ಪ್ರತ್ಯೇಕ ಕರ್ನಾಟಕ ರಚನೆ ಅಸಾಧ್ಯವೆನ್ನುವುದನ್ನು ಅರಿತ ಈ ಮುಖಂಡರು ತಿಲಕರನ್ನು ಬೆಂಬಲಿಸುತ್ತಿದ್ದರು.

ಸ್ವಾತಂತ್ರ್ಯ ಮತ್ತು ಕರ್ನಾಟಕತ್ವ ಎನ್ನುವ ಪ್ರಶ್ನೆ ಬಂದಾಗ ಕೆಲವರು ಸ್ವಾತಂತ್ರ್ಯ ಹೋರಾಟದಲ್ಲಿ ಮಾತ್ರ ಪಾಲ್ಗೊಂಡರೆ, ಇನ್ನು ಕೆಲವರು ಸ್ವಾತಂತ್ರ್ಯ ಹೋರಾಟ ಹಾಗೂ ಏಕೀಕರಣ ಎರಡರಲ್ಲೂ ಪಾಲ್ಗೊಂಡರು. ಏಕೀಕರಣವು ಕಾಂಗ್ರೆಸ್‌ನಿಂದ ಆಗುವ ತನಕ ಸುಮ್ಮನೆ ಕುಳಿತುಕೊಳ್ಳೋಣ ಎನ್ನುವರೆ ಹೆಚ್ಚಿದ್ದರು. ಈ ಕಾಲಕ್ಕೆ ಆಲೂರು ವೆಂಕಟರಾಯರು, ಕಡಪಾ ರಾಘವೇಂದ್ರರಾಯರು, ರಂಗನಾಥ ದಿವಾಕರರು ಎರಡೂ ಚಳವಳಿಗಳನ್ನು ಮುನ್ನಡೆಸಿದರು.[೪] ಈ ಎಲ್ಲ ಕಾರಣಕ್ಕಾಗಿಯೇ ಆಲೂರು ವೆಂಕಟರಾಯರು, ಹನುಮಂತರಾವ ಸಾವನೂರು, ಅನಂತರಾವ ಚಿಕ್ಕೋಡಿ, ರಂಗನಾಥ ದಿವಾಕರ, ಮಧ್ವರಾವ ಕಬ್ಬೂರು ಇವರೆಲ್ಲರೂ ಸೇರಿಕೊಂಡು ಕನ್ನಡತ್ವಕ್ಕಾಗಿ ಸಭೆಗಳನ್ನು ಹಮ್ಮಿಕೊಂಡು, ಜನರಲ್ಲಿ ಕನ್ನಡದ ಜಾಗೃತಿಯನ್ನು ಮೂಡಿಸತೊಡಗಿದರು. ಆರಂಭದಲ್ಲಿ ಕರ್ನಾಟಕತ್ವದ ಚಳವಳಿಗೆ ಕನ್ನಡಿಗರಿಂದಲೇ ವಿರೋಧ ಉಂಟಾಯಿತು. ಕಲ್ಕತ್ತದಲ್ಲಿ ಅಸಹಕಾರ ಚಳವಳಿ ಘೋಷಣೆಯಾದ ಕೂಡಲೇ ಅದರ ಸಂದೇಶ ಸಾರಲು ಗಂಗಾಧರರಾವ ದೇಶಪಾಂಡೆಯವರು ಧಾರವಾಡಕ್ಕೆ ಬಂದರು. ಕಡಪಾ ರಾಘವೇಂದ್ರರಾಯರು ಗಂಗಾಧರರಾಯರನ್ನು ಕನ್ನಡದಲ್ಲೇ ಮಾತನಾಡಬೇಕೆಂದು ಒತ್ತಾಯ ತಂದರು. ಅದಕ್ಕೆ ಗಂಗಾಧರರಾಯರು ಒಪ್ಪಲಿಲ್ಲ. ಈ ಥರದ ಕಾಂಗ್ರೆಸ್ಸಿಗರ ಧೋರಣೆಯಿಂದ ನೊಂದುಕೊಂಡ ಆಲೂರರು ಕಾಂಗ್ರೆಸ್ಸಿನ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ಇದು ಒಂದು ಕಾರಣವಾಗಿತ್ತು.[೫] ಈ ಕೆಲಸದಲ್ಲಿ ಬೆಳಗಾವಿಯ ಗಂಗಾಧರರಾವ ದೇಶಪಾಂಡೆ ಅವರು ಮೌನ ವಹಿಸಿದ್ದು ಕನ್ನಡಿಗರಿಗೆ ನೋವನ್ನು ತರದೆ ಇರದು. ಧಾರವಾಡದಂತೆ ಕನ್ನಡದ ಚಟುವಟಿಕೆಗಳು ಬೆಳಗಾವಿಯಲ್ಲೂ ನಡೆದಿದ್ದರೆ, ಪ್ರಸ್ತುತ ಸಂದರ್ಭದ ಆ ಪ್ರದೇಶದ ಸಮಸ್ಯೆಗೆ ಅಂದೇ ಪರಿಹಾರ ದೊರಕುತಿತ್ತು. ಹೋಂರೂಲ್ ಲೀಗ್ ಚಳವಳಿಯು ಭಾರತದಂತೆ ಕರ್ನಾಟದಲ್ಲಿ ಪ್ರಚಾರಗೊಳ್ಳುವ ಮೂಲಕ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತ್ಯ ದೊರಕಿತು. ಈ ಮೂಲಕ ಕನ್ನಡಿಗರ ಕನ್ನಡ ಚಟುವಟಿಕೆಗೆ ಹುರುಪು ಬಂದಿತು. ಧಾರವಾಡದ ಸುತ್ತಮುತ್ತ ಮರಾಠಿ ಪ್ರಭಾವವನ್ನು ತಡೆಯಲು ಆಲೂರಾದಿ ಅನೇಕ ಕನ್ನಡ ಮುಖಂಡರು ತಲ್ಲೀನರಾದರು.[೬] ಆಗ ಸರಕಾರಿ ಇಲಾಖೆಗಳಲ್ಲಿ, ಸಾರ್ವಜನಿಕ ಚಟುವಟಿಕೆಗಳಲ್ಲಿ ಮರಾಠಿಗರ ಪ್ರಭಾವ ಅಧಿಕವಾಗಿದ್ದು ಕನ್ನಡ ಭಾಷೆ ಹಾಗೂ ಜನತೆ ಮರಾಠಿಯ ತೊತ್ತಾಗಿದ್ದರು. ಕನ್ನಡಿಗರಿಗೆ ಈ ವಿಚಾರ ನೋವನ್ನುಂಟು ಮಾಡದೆ ಇರದು. ಈ ಕಾಲಕ್ಕೆ ಆಲೂರರು ಕನ್ನಡಿಗರ ಹೀನ ಭಾವನೆಯನ್ನು ತೊಡೆದುಹಾಕಲು ಕನ್ನಡದ ಕೆಲಸದಲ್ಲಿ ತೊಡಗಿಕೊಳ್ಳಲು ಹುರಿದುಂಬಿಸಿ, ಪುರಸ್ಕರಿಸುವ, ಗೌರವಿಸುವ ಕೆಲಸವನ್ನು ಮಾಡಿ ಅವರಲ್ಲಿ ಆತ್ಮಗೌರವವನ್ನು ಹುಟ್ಟು ಹಾಕಿದರು. ಕನ್ನಡಿಗರಿಗಾಗಿ, ಅವರ ಐಕ್ಯತೆಗಾಗಿ ಅನೇಕ ಸಂಘ-ಸಂಸ್ಥೆಗಳನ್ನು ಹುಟ್ಟುಹಾಕುವ ಯೋಜನೆಯನ್ನು ಹೂಡಿದರು. ಈ ಥರದ ಚಟುವಟಿಕೆಗಳೆಲ್ಲ ಅನೇಕ ಸಂಘ-ಸಂಸ್ಥೆಗಳು, ಪತ್ರಿಕೆಗಳ ಮೂಲಕ ನೆರವೇರಿದವು. ಅದಕ್ಕಾಗಿ ಆಲೂರು ವೆಂಕಟರಾಯರು ೧೯೦೬ ರಲ್ಲಿ 'ವಾಗ್ಭೂಷಣ' ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡರು.[೭] ಹಲವು ಕಡೆ ಹಂಚಿಹೋದ ಕನ್ನಡಿಗರು ಒಂದಾಗಬೇಕು. ಇದರಿಂದ ಕನ್ನಡಿಗರ ಏಕತೆಗೂ, ಅವರ ಅಭಿವೃದ್ಧಿಗೂ ಅನುಕೂಲವಾಗುವುದು ಎಂದು ವಿದ್ಯಾವರ್ಧಕ ಸಂಘವು ೦೭-೧೦-೧೯೦೭ ರಂದು ಕರ್ನಾಟಕ ಏಕೀಕರಣದ ಪ್ರಥಮ ಗೊತ್ತುವಳಿಯನ್ನು ಪಾಸುಮಾಡಿತು. ಕನ್ನಡಿಗರ ರಾಜಕೀಯ ಒಗ್ಗಟ್ಟಿಗೆ ಪ್ರಯತ್ನಪಟ್ಟು ಕರ್ನಾಟಕ ಏಕೀಕರಣ ಸಮಿತಿಯ ರಚನೆಗೆ ಮುಂದಾದರು. ಕನ್ನಡ ನಾಡಿನ ವಿವಿಧ ಪ್ರದೇಶಗಳಲ್ಲಿ ಭಾಷಾ ಏಕರೂಪತೆ ಇಲ್ಲದೆ ಸಾಹಿತ್ಯ ಉದ್ಧಾರವಾಗಲಾರದು. ಅನೇಕ ಪ್ರದೇಶಗಳಲ್ಲಿ ಹರಿದು ಹಂಚಿಹೋದ ಕನ್ನಡಿಗರಲ್ಲಿ ಪರಸ್ಪರ ಬಾಂಧವ್ಯ ಇಲ್ಲದೆ ಅಖಂಡ ಕರ್ನಾಟಕ ರಚನೆಯಾಗದು ಎಂದು ಆಲೂರರು, ನರಗುಂದಕರ ರಾಮರಾಯರು ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಕರೆಯುವ ಯೋಜನೆಯನ್ನು ಹೂಡಿದರು. ಮೊದಲನೆ ಮತ್ತು ಎರಡನೇ ಸಮ್ಮೇಳನಗಳು ಧಾರವಾಡದಲ್ಲಿ ೧೯೦೭ ಮತ್ತು ೧೯೦೮ ರಲ್ಲಿ ಜರುಗಿತು.[೮] ಈ ಮೂಲಕ ಅಖಂಡ ಕನ್ನಡಿಗರನ್ನು ಒಂದೇ ವೇದಿಕೆಗೆ ತರುವ ಪ್ರಯತ್ನ ಸಾಗಿತು. ೧೯೧೫ ರಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಹುಟ್ಟುಹಾಕಲು ಆಲೂರರು, ಅವರ ಸ್ನೇಹಿತರು ಯೋಜಿಸಿದರು. ಆಲೂರರು ಅದಕ್ಕಾಗಿ ಮೈಸೂರು, ಮಂಗಳೂರು, ಬೆಂಗಳೂರು ಹೀಗೆ ಅನೇಕ ಕಡೆ ತಮ್ಮ ಸ್ವಂತ ಖರ್ಚಿನಿಂದಲೇ ಸುತ್ತಿದರು. ಅಖಿಲ ಕರ್ನಾಟಕ ಮಟ್ಟದಲ್ಲಿ ಕನ್ನಡ ಸಾಹಿತ್ಯದ ಅಭಿವೃದ್ಧಿಗಾಗಿ, ಕನ್ನಡ ಸಾಹಿತ್ಯ ಮತ್ತು



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ಕನ್ನಡ ನಾಡನ್ನು ಒಂದುಗೂಡಿಸಲು ಸಾಹಿತ್ಯ ಪರಿಷತ್ತನ್ನು ಕಟ್ಟಿ ಆ ಮೂಲಕ ಜನ ಜಾಗೃತಿಗೆ ಯೋಜಿಸಿದರು. ಅದಕ್ಕಾಗಿ ವರಿಷ್ಠ ಅಧಿಕಾರಿಗಳನ್ನು, ಕನ್ನಡ ಮುಖಂಡರನ್ನು ಭೇಟಿಯಾಗಿ ಕನ್ನಡ ನಾಡು–ನುಡಿ–ಗಡಿಯ ವಿಚಾರಗಳ ಕುರಿತು ಚರ್ಚಿಸಿದರು. ಅಖಿಲ ಕರ್ನಾಟಕದ ಗ್ರಂಥಕರ್ತರ ೩ನೇ ಸಮ್ಮೇಳನವು ಸಹ ಬೆಂಗಳೂರಿನಲ್ಲಿ ಕೈಗೂಡಿಸಲಾಯಿತು. ಕೈಕಿಣಿ, ದೇಶಪಾಂಡೆ ಅವರಿಂದ ೧೮೯೦ರ ಹೊತ್ತಿಗೆ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಗೊಂಡಿತ್ತು. ಈ ಸಂಸ್ಥೆಗೆ ಮೈಸೂರು ಅರಸರ ಪ್ರೋತ್ಸಾಹವು ಇದ್ದಿತು. ಬೆಂಗಳೂರನ್ನು ಕೇಂದ್ರೀಕರಿಸಿಕೊಂಡು ಕರ್ನಾಟಕ ಕೇಂದ್ರ ಸಂಸ್ಥೆಯನ್ನು ಸ್ಥಾಪಿಸಬೇಕೆನ್ನುವುದು ಆಲೂರರ ಆಶಯವಾಗಿತ್ತು. ಇದಕ್ಕೆ ಮುಖ್ಯ ಕಾರಣ ಅಖಂಡ ಕರ್ನಾಟಕ ರಚನೆಗೆ ಮೈಸೂರಿಗರ ಬೆಂಬಲದ ಅವಶ್ಯಕತೆ ಇದ್ದಿತು. ಹಾಗೇ ಮೈಸೂರಿಗರಿಗೂ ಇತರ ಕನ್ನಡಿಗರ ಅವಶ್ಯಕತೆ ಇತ್ತು. ಆದರೆ ಮೈಸೂರಿಗರಲ್ಲಿ ಕರ್ನಾಟಕತ್ವದ ಭಾವನೆ ಇಲ್ಲದೆ ಸಂಕುಚಿತ ಯೋಚನೆಯಲ್ಲಿ ತಾವೇ ಶ್ರೇಷ್ಠರೆಂಬ ಕಲ್ಪನೆಗಳು ಹುಟ್ಟಿಕೊಂಡಿದ್ದವು ಎಂದು ಆಲೂರರು ಉಲ್ಲೇಖಿಸುತ್ತಾರೆ.[೯] ಆಲೂರರ ಎಲ್ಲ ಕೆಲಸಕ್ಕೆ ಅವರ ಮಿತ್ರರು, ಸಾಹಿತಿಗಳು ಆದ ಡಿ.ವಿ ಗುಂಡಪ್ಪನವರ ಬೆಂಬಲವಿದ್ದಿತು. ಡಿ.ವಿ.ಜಿ ಅವರು ಇಂಗ್ಲೀಷನಲ್ಲಿ 'ಕರ್ನಾಟಕ' ಎನ್ನುವ ಪತ್ರಿಕೆಯನ್ನು ಹುಟ್ಟುಹಾಕಿದರು. ಬೆಂಗಳೂರಿನಲ್ಲಿ ಗ್ರಂಥಕರ್ತರ ಸಮ್ಮೇಳನವನ್ನು ಕೂಡಿಸಲು ಆಲೂರರು ಅಲ್ಲಿಯ ಡೈರೆಕ್ಟರ್ ಆಗಿದ್ದ ಕೆ.ಸಿ.ರೆಡ್ಡಿ ಅವರನ್ನು ಕಂಡರು. ಆದರೆ ಅವರು ತೆಲುಗರಾದ್ದರಿಂದ ಅನುಮತಿ ನೀಡಲಿಲ್ಲ. ನಂತರ ೧೯೧೪ ರಲ್ಲಿ ಸಂಘಕ್ಕೆ ಭೇಟಿ ನೀಡಲು ರಾ.ಬ.ಶ್ಯಾಮರಾಯರು ಬಂದರು. ಅವರಿಂದ ಕನ್ನಡ ಸಾಹಿತ್ಯ ಸಂಸ್ಥೆಯನ್ನು ಸ್ಥಾಪಿಸುವ ಮಾತನ್ನು ಪಡೆದರು. ಹಾಗೇ ಕರ್ಪೂರ ಶ್ರೀನಿವಾಸರಾಯರ ಸಹಾಯವನ್ನು ಪಡೆದುಕೊಂಡರು. ಹೀಗೆ ಅನೇಕ ಅಧಿಕಾರಿಗಳನ್ನು ಕಂಡು ಮುಖ್ಯವಾಗಿ ನಂಜುಂಡಯ್ಯನವರ ಸಹಕಾರದಿಂದ ಸರ್.ಎಂ.ವಿಶ್ವೇಶ್ವರಯ್ಯನವರ ಬಲದಿಂದ ೪ ವರ್ಷದ ಅಲೆದಾಟದ ನಂತರ ೧೯೧೫ ರಲ್ಲಿ ಬೆಂಗಳೂರಿನಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಕೈಗೊಳ್ಳಲಾಯಿತು. ಅಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆಗೊಂಡಿತು. ಬಿ.ಕೃಷ್ಣಪ್ಪನವರು ಅದರ ಮೊದಲ ಕಾರ್ಯದರ್ಶಿಗಳಾದರು.[೧೦] ಈ ಮೂಲಕ ಕನ್ನಡಕ್ಕೆ ಹೊಸ ಶಕ್ತಿ ಬಂದಿತು. ಹಾಗೇ ಕರ್ನಾಟಕ ಏಕೀಕರಣಕ್ಕೆ ಚಾಲನೆ ದೊರಕಿತು. ಕರ್ನಾಟಕತ್ವದ ಅರಿವು ಕನ್ನಡಿಗರಲ್ಲಿ ಮೂಡಿಸಿತು. ೧೯೧೬ ರಲ್ಲಿ ಧಾರವಾಡದಲ್ಲಿ ಕರ್ನಾಟಕ ಸಭಾ ಪ್ರಾರಂಭವಾಯಿತು. ನಾಗಪುರದಲ್ಲಿ ೧೯೨೦ ರಲ್ಲಿ ಕಾಂಗ್ರೆಸ್ ಅಧಿವೇಶನ ನಡೆದು, ಅಲ್ಲಿಯ ನಿರ್ಣಯದಂತೆ ಕರ್ನಾಟಕ ಪ್ರದೇಶದಲ್ಲಿ ಎರಡು ದೊಡ್ಡ ಸಂಸ್ಥಾನಗಳಾದ ಮೈಸೂರು ಹಾಗೂ ಹೈದ್ರಾಬಾದ್‌ನ ಕರ್ನಾಟಕ ಸಂಸ್ಥಾನಗಳಲ್ಲಿಯ ಕನ್ನಡ ಭಾಗಗಳನ್ನು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್‌ನಲ್ಲಿ ಸೇರಿಸಲಾಯಿತು.[೧೧] ಕಡಪಾ ರಾಘವೇಂದ್ರರಾಯರ ಪ್ರಯತ್ನದಿಂದ ೧೯೨೪ ರಲ್ಲಿ ಬೆಳಗಾವಿಯಲ್ಲಿ ಕರ್ನಾಟಕ ಏಕೀಕರಣದ ಸಭೆಯು ನಡೆಯಿತು. ಕರ್ನಾಟಕ ಪ್ರಾಂತೀಯ ಸಮಿತಿಯ ಜೊತೆಗೂಡಿ ಕರ್ನಾಟಕ ಏಕೀಕರಣದ ಅನೇಕ ಸಭೆ, ಸಮ್ಮೇಳನಗಳನ್ನು ನಡೆಸಲಾಯಿತು. ೧೯೩೦ ರಲ್ಲಿ ಮೈಸೂರಿನಲ್ಲಿ ನಡೆದ ೧೬ನೇ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡ ಸಂಸ್ಕೃತಿಯಲ್ಲಿ ಏಕರೂಪತೆ ಉಂಟಾಗಬೇಕಾದರೆ, ಅಖಿಲ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದು ಸಲಹೆ ನೀಡಿದರು. ಉತ್ತರ ಕರ್ನಾಟಕ, ಮೈಸೂರು, ಮಂಗಳೂರು ಇತರೆಡೆ ಕನ್ನಡ ಏಕರೂಪತೆ ಇಲ್ಲದಿರುವುದರಿಂದ ಈ ಪ್ರದೇಶಗಳ ಪ್ರತಿನಿಧಿಗಳನ್ನು ಒಂದೆಡೆ ಸೇರಿಸಬೇಕೆಂದು ಉದ್ದೇಶಿಸಿ ಆಲೂರು ವೆಂಕಟರಾಯರು ಮತ್ತು ಅವರ ಸಂಗಡಿಗರು ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಕೈಗೊಳ್ಳುವ ಯೋಜನೆಯನ್ನು ಹೂಡಿದರು.[೧೨] ಆಲೂರರು ಧಾರವಾಡದಲ್ಲಿ ಮೊದಲ ಮತ್ತು ೨ನೇ ಗ್ರಂಥಕರ್ತರ ಸಮ್ಮೇಳನ, ಕರ್ನಾಟಕ ಗ್ರಂಥ ಪ್ರಕಾಶಕ ಮಂಡಳಿ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ ಹೀಗೆ ಹಲವು ಸಂಸ್ಥೆಗಳ ಹುಟ್ಟುವಿಕೆಗೆ ಬುನಾದಿಯನ್ನು ಹಾಕಿದರು. ಈ ಮೂಲಕ ಕನ್ನಡಿಗರಲ್ಲಿ ಕನ್ನಡ ಸಾಹಿತ್ಯ, ನಾಡು–ನುಡಿ–ಗಡಿಯ ವಿಚಾರಗಳು, ಕನ್ನಡ ಪುಸ್ತಕಗಳ ಜ್ಞಾನ, ಕನ್ನಡ ನಾಡಿನ ಇತಿಹಾಸದ ಕುರಿತು ಜಾಗೃತಿಯನ್ನು ಮೂಡಿಸಿ ಕನ್ನಡಿರಲ್ಲಿ ಕನ್ನಡತನವನ್ನು ಹುಟ್ಟುಹಾಕಿದರು.[೧೩]

ಹಲವು ಗೆಳೆಯರನ್ನು ಕೂಡಿಸಿಕೊಂಡ ದ.ರಾ ಬೇಂದ್ರೆ ಅವರು ಧಾರವಾಡದಲ್ಲಿ 'ಗೆಳೆಯರ ಬಳಗ' ಎನ್ನುವ ಸಂಘವನ್ನು ಕಟ್ಟಿ, ಇದರಡಿ ನಾಡಿನ ನವ್ಯ ಹಾಗೂ ನವೋದಯ ಸಾಹಿತಿಗಳನ್ನು ಹುಟ್ಟುಹಾಕುವ ಕೆಲಸವನ್ನು ಮಾಡಿದರು. ಈ ಸಂಘ ಕನ್ನಡ ನಾಡಿನ ಅನೇಕ ಕಡೆಗಳಲ್ಲಿ ತನ್ನ ಶಾಖೆಗಳನ್ನು ತೆರೆಯಿತು. ಈ ಮೂಲಕ ಕನ್ನಡ ವೈಚಾರಿಕ ಪ್ರಜ್ಞೆಯೊಂದಿಗೆ ನಾಡು–ನುಡಿಯ ಬೆಳವಣಿಗೆಯಲ್ಲಿ ಸಾಹಿತ್ಯದ ಛಾಪನ್ನು ಮೂಡಿಸಿತು. ಇದರ ಮೂಲಕ ೧೯೨೬ ರಲ್ಲಿ ನಾಡಹಬ್ಬವನ್ನು ಸಣ್ಣ ಪ್ರಮಾಣದಲ್ಲಿ ಧಾರವಾಡದಲ್ಲಿ ಪ್ರಾರಂಭಿಸಲಾಯಿತು. ಈ ನಾಡಹಬ್ಬವನ್ನು ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರತಿ ವರ್ಷ ಆಚರಿಸತೊಡಗಿತು. ಮೈಸೂರಿನಲ್ಲಿ ದಸರಾ ಉತ್ಸವ, ಧಾರವಾಡದ ನಾಡಹಬ್ಬಗಳು ಕನ್ನಡಿಗರ ರಾಷ್ಟ್ರೀಯ ಹಬ್ಬಗಳಾಗಿ ಆಚರಿಸಲ್ಪಟ್ಟವು.[೧೪] ಧಾರವಾಡದಲ್ಲಿ ನಾಡಹಬ್ಬವು ವಿಜೃಂಭಣೆಯಿಂದ ನಡೆಯುತಿತ್ತು. ಇದು



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ಜಾತ್ಯಾತೀತವಾಗಿ, ರಾಷ್ಟ್ರೀಯವಾಗಿರಬೇಕೆಂದು ಆಲೂರರು ಯೋಚಿಸುತಿದ್ದರು. ಈ ನಾಡಹಬ್ಬದ ಮೂಲಕ ನಾಡು-ನುಡಿಯ ಚಿಂತನೆಯನ್ನು ಜನತೆಯಲ್ಲಿ ಬಿತ್ತುವ ಹಾಗೂ ಪ್ರಸಾರಗೊಳಿಸುವ ಕಾರ್ಯದಲ್ಲಿ ಧಾರವಾಡದ ಪ್ರಮುಖರು ಕೆಲಸ ಮಾಡುತಿದ್ದರು. ದಿವಾಕರರು ತಮ್ಮ ಪತ್ರಿಕೆಯಾದ ಕರ್ಮವೀರದಲ್ಲಿ ಯಾರೂ ಭಾವನಾವಶರಾಗಬಾರದು. ಪ್ರಯೋಗಾತ್ಮಕವಾಗಿ ನೋಡಿ ಎಂದು ತಿಳಿಸಿದ್ದರು. ಆದರೆ ನಾಡಹಬ್ಬ ಆಚರಣೆಯು ಧಾರವಾಡ ಭಾಗದಲ್ಲಿ ಗಾಂಧಿ ಚಳವಳಿಯಷ್ಟೇ ಜನಪ್ರೀಯವಾಯಿತು. ಕನ್ನಡತ್ವವನ್ನು ಹುಟ್ಟುಹಾಕಲು ಸಹಕಾರಿಯಾಯಿತು.[೧೫]

ಈ ರೀತಿಯಾಗಿ ಧಾರವಾಡದಲ್ಲಿ ಜರುಗುತಿದ್ದ ನಾಡು-ನುಡಿ ಪರವಾದ ಚಟುವಟಿಕೆಗಳು ಕನ್ನಡಿಗರನ್ನು ಎಚ್ಚರಿಸಲು ದಾರಿ ಮಾಡಿದವು. ಧಾರವಾಡದಲ್ಲಿ ಕನ್ನಡ ಕಟ್ಟಿದ ಪ್ರಮುಖರಲ್ಲಿ ಆಲೂರರು, ಡೆಪ್ಯೂಟಿ ಚೆನ್ನಬಸಪ್ಪರು ಪ್ರಮುಖರು. ಆಲೂರರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿಯ ಪುಸ್ತಕಗಳ ಧೂಳು ಜಾಡಿಸಿ ಕನ್ನಡ ಪುಸ್ತಕಗಳ ಲೇಖನಗಳ ಬಾಗಿಲನ್ನು ತೆರೆದು ಹೆಚ್ಚು-ಹೆಚ್ಚು ಕನ್ನಡ ಪುಸ್ತಕಗಳನ್ನು ಅಲ್ಲಿ ಸೇರಿಸಿದರು. ಸಂಘದ ಮುಖಪತ್ರಿಕೆಯಾದ ವಾಗ್ಭೂಷಣದ ಸಂಪಾದಕತ್ವವು ೧೯೦೭ ರಲ್ಲಿ ದೊರೆತ ನಂತರ ತಮ್ಮ ಕಲ್ಪನೆಯ ಕರ್ನಾಟಕದ ರೂಪುರೇಷಗಳನ್ನು ಅದರಲ್ಲಿ ತಿಳಿಸಿ ಕರ್ನಾಟಕ ಏಕೀಕರಣದ ಜರೂರನ್ನು ಜನತೆಯಲ್ಲಿ ಭಿತ್ತಿ ಬೆಳೆಸಿದರು.[೧೬]

ಹೀಗೆ ಅನ್ಯ ಭಾಷಿಕರ ಒತ್ತಡಕ್ಕೆ ಸಿಲುಕಿದ್ದ ಮುಂಬೈ ಕನ್ನಡಿಗರು, ಮದ್ರಾಸ್ ಕನ್ನಡಿಗರು ಹಾಗೇ ಹೈದ್ರಾಬಾದ್ ಕನ್ನಡಿಗರಿಗೆ ಕರ್ನಾಟಕ ಏಕೀಕರಣದ ತುರ್ತು ಹೆಚ್ಚಿತ್ತು. ಇದಕ್ಕೆ ಈ ಭಾಗದ ಕನ್ನಡದ ಅಸ್ಮಿಕತೆಯ ಸಮಸ್ಯೆಯೇ ಕಾರಣವಾಗಿದೆ. ಹೀಗಾಗಿ ಕನ್ನಡ ಚಳವಳಿ ಮುಂಬೈ ಕನ್ನಡಿಗರಿಂದ ಆರಂಭವಾಯಿತು. ಕನ್ನಡ ನಾಡಿನಲ್ಲಿ ನೆಲೆನಿಂತ ಇತರ ಭಾಷಿಕರ ಪ್ರಭಾವವನ್ನು ತಡೆಗಟ್ಟುವಲ್ಲಿ ಉತ್ತರ ಕರ್ನಾಟಕದವರ ಪಾತ್ರ ಮುಖ್ಯವಾಗಿದೆ.

**ಟಿಪ್ಪಣಿಗಳು**

೧. ರಂಗನಾಥ ದಿವಾಕರ., (೧೯೫೬), ಕರ್ನಾಟಕ ಏಕೀಕರಣದ ಕಥೆ. ಪು.ಸಂ-೨
೨. ಶ್ರೀನಿವಾಸರಾವ ರಿತ್ತಿ ಮತ್ತು ಸುರೇಂದ್ರ ದಾನಿ(ಸಂ)., (೨೦೧೯), ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರ ಸಮಗ್ರ ಕೃತಿಗಳು, ಸಂ-೧. ಪು.ಸಂ-೬೬೯
೩. ಕಲ್ಲನಗೌಡ ಪಾಟೀಲ., (೧೯೮೬), ಕರ್ನಾಟಕ ಏಕೀಕರಣದ ಹಾದಿಯಲ್ಲಿ, ನೆನಪಿನ ಒರತೆ-೩. ಪು.ಸಂ-೯
೪. ಶ್ರೀನಿವಾಸರಾವ ರಿತ್ತಿ ಮತ್ತು ಸುರೇಂದ್ರ ದಾನಿ(ಸಂ)., (೨೦೧೯), ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರ ಸಮಗ್ರ ಕೃತಿಗಳು, ಸಂ-೧. ಪು.ಸಂ-೫೫೦
೫. ಅದೇ., ಪು.ಸಂ-೪೩೦
೬. ಮಾಳವಾಡ ಸ.ಸ(ಸಂ)., (೧೯೮೨), ಕರ್ನಾಟಕ ಕುಲಪುರೋಹಿತ ಆಲೂರು ವೆಂಕರಾಯರನ್ನು ಕುರಿತು ಸಂಸ್ಮರಣ ಗ್ರಂಥ. ನಿಂಗಣ್ಣ ಸಣ್ಣಕ್ಕಿ(ಲೇ), ಕರ್ನಾಟಕ ಹೋರಾಟಗಾರರಾಗಿ ಆಲೂರು ವೆಂಕಟರಾಯರು(ಲೇ). ಪು.ಸಂ-೧೨೪
೭. ಅದೇ., ಪು.ಸಂ-೧೨೫
೮. ಶ್ರೀನಿವಾಸರಾವ ರಿತ್ತಿ ಮತ್ತು ಸುರೇಂದ್ರ ದಾನಿ(ಸಂ)., (೨೦೧೯), ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರ ಸಮಗ್ರ ಕೃತಿಗಳು, ಸಂ-೧. ಪು.ಸಂ-೬೭೬
೯. ಅದೇ., ಪು.ಸಂ-೬೭೭
೧೦. ಅದೇ., ಪು.ಸಂ-೬೭೯
೧೧. ಮಾಳವಾಡ ಸ.ಸ(ಸಂ)., (೧೯೮೧), ಕರ್ನಾಟಕ ಕುಲಪುರೋಹಿತರು, ವರದರಾಜ ಹುಯಿಲಗೋಲ(ಲೇ), ಕರ್ನಾಟಕ ಸ್ಥಿತಿ-ಗತಿ-೨(ಲೇ). ಪು.ಸಂ-೧೬೩
೧೨. ಆಲೂರು ವೆಂಕಟರಾಯರು., (), ನನ್ನ ಜೀವನ ಸ್ಮೃತಿ. ಪು.ಸಂ-೧೬೨
೧೩. ಅದೇ., ಪು.ಸಂ-೧೨೫
೧೪. ಮಾಳವಾಡ ಸ.ಸ(ಸಂ)., (೧೯೮೧), ಕರ್ನಾಟಕ ಕುಲಪುರೋಹಿತರು, ವರದರಾಜ ಹುಯಿಲಗೋಲ(ಲೇ), ಕರ್ನಾಟಕ ಸ್ಥಿತಿ-ಗತಿ-೨(ಲೇ). ಪು.ಸಂ-೧೭೦
೧೫. ಜೋಶಿ ಎನ್.ಎಂ(ಪ್ರ.ಸಂ)., (೧೯೯೬), ಕರ್ಮವೀರ, ಅಮೃತೋತ್ಸವ ವಿಶೇಷಾಂಕ. ಪು.ಸಂ-೩೪
೧೬. ಮಾಳವಾಡ ಸ.ಸ(ಸಂ)., (೧೯೮೧), ಕರ್ನಾಟಕ ಕುಲಪುರೋಹಿತ (ಆಲೂರು ವೆಂಕರಾಯರನ್ನು ಕುರಿತು ಸಂಸ್ಮರಣ ಗ್ರಂಥ). ಮಾಧವನಾ ಮಹಿಷಿ(ಲೇ), ಪತ್ರಿಕೋದ್ಯಮಿ ಆಲೂರು ವೆಂಕಟರಾಯರು(ಲೇ). ಪು.ಸಂ-೧೩೫



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101